ಒ.ಎಸ್. - 98/2024
ಪಿ.ಡಬ್ಲ್ಯು. - 01

**ದಿನಾಂಕ 12-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - 2 ಮತ್ತು 3 ನೇ ಪ್ರತಿವಾದಿಯರ ಪರ ವಕೀಲರಿಂದಃ**

ನನಗೆ 2 ನೇ ಪ್ರತಿವಾದಿಯ ಪರಿಚಯ ಇದೆ 3 ನೇ ಪ್ರತಿವಾದಿಯ ಪರಿಚಯ ಇಲ್ಲ . 2 ಮತ್ತು 3 ನೇ ಪ್ರತಿವಾದಿಗಳಿಗೆ ದಾವೆ ಹಾಕುವ ಮೊದಲು ನೋಟಿಸು ಕೊಟ್ಟಿಲ್ಲ . ದಾವೆ ಹಾಕುವ ಮೊದಲು ಒಂದನೇ ಪ್ರತಿವಾದಿಗೆ ನೋಟಿಸು ಕೊಟ್ಟಿರುತ್ತೇನೆ . 2 ಮತ್ತು 3 ನೇ ಪ್ರತಿವಾದಿಗಳ ವಿರುದ್ದ ಯಾವುದೇ ಪರಿಹಾರ ಕೋರಿಲ್ಲ ಎಂದರೆ ಸರಿ. ನಾನು 2 ಮತ್ತು 3 ನೇ ಪ್ರತಿವಾದಿಗಳನ್ನು ಅನಾವಶ್ಯಕವಾಗಿ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿಗಳು ಹಾಕಿದ ಪ್ರತಿವಾದ ಪತ್ರದ ಬಗ್ಗೆ ನನಗೆ ಗೊತ್ತಿಲ್ಲ. 2 ಮತ್ತು 3 ನೇ ಪ್ರತಿವಾದಿಗಳಿಗೆ ಮಾನಸಿಕ ಹಿಂಸೆ ಕೊಡುವ ಉದ್ದೇಶದಿಂದ ಅವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.